ದಿನಾಂಕ **: 02-03-2024** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

15. ನಂತರ 1 ಮತ್ತು 2 ನೇ ಆರೋಪಿತರು ಪ್ರಕಾಶನನ್ನು ಕೊಲೆ ಮಾಡಿದ ಬಳಿಕ ಆತನ ಶವವನ್ನು ಪ್ರಕಾಶನ ಆಟೋದಲ್ಲಿಯೇ ತೆಗೆದುಕೊಂಡು ಹೋಗಿ ಹೇಮಗಿರಿಯ ಕೆರೆಯ ಏರಿ ಹಿಂಭಾಗದಲ್ಲಿ ಎಸೆದಿದ್ದಾಗಿ ತಿಳಿಸಿ, ಸದರಿ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತಾವು ಪ್ರಕಾಶನ ಶವವನ್ನು ಎಸೆದಿದ್ದಾಗಿ ತಿಳಿಸಿದರು. ಸದರಿ ಸ್ಥಳ ಕೆರೆಯ ಏರಿಯ ಕೆಳಭಾಗವಾಗಿತ್ತು. ಪೊಲೀಸರು ಆರೋಪಿತರನ್ನು ಕುರಿತು ಮೃತನ ಬಟ್ಟೆ ಮತ್ತು ಮೊಬೈಲನ್ನು ಏನು ಮಾಡಿದಿರಿ ಎಂದು

ಕೇಳಿದರು. ಆಗ ಆರೋಪಿತರು ಅವುಗಳನ್ನು ಕೆರೆಯ ಒಳಗೆ ಹಾಕಿದ್ದಾಗಿ ತಿಳಿಸಿ, ಸ್ಥಳವನ್ನು ತೋರಿಸಿದರು. ಪೊಲೀಸರು ಅಲ್ಲಿಗೆ ಹೋಗಿ ಹುಡುಕಾಡಿದರು ಅವು ಸಿಗಲಿಲ್ಲ. ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 12.15 ರಿಂದ 1.15 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು, ಅದಕ್ಕೆ ನಾನು, ಮತ್ತು ಚಾಸಾ-14-ಹನುಮಂತಪ್ಪರವರು ಸಹಿ ಮಾಡಿದ್ದೇವೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿ.ಪಿ. 28 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 28(ಎ) ಎಂದು ಗುರುತಿಸಲಾಯಿತು .

16. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿ, ಸದರಿ ನಕ್ಷೆಯನ್ನು ಪೊಲೀಸರು ಮೇಲೆ ಹೇಳಿದ ಸ್ಥಳದಲ್ಲಿಯೇ ತಯಾರಿಸಿದ್ದಾಗಿ ನುಡಿದಿರುತ್ತಾರೆ. ಸದರಿ ನಕ್ಷೆಯನ್ನು ನಿ.ಪಿ. 29 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ. 29(ಎ) ಎಂದು ಗುರುತಿಸಲಾಯಿತು .

17. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿ, ಸದರಿ ಫೋಟೋವನ್ನು ಮೇಲೆ ಹೇಳಿದಂತೆ ಆರೋಪಿತರು ಪ್ರಕಾಶನ ಶವವನ್ನು ಎಸೆದ ಸ್ಥಳವನ್ನು ತೋರಿಸಿದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು

ಜರುಗಿಸುವಾಗ ತೆಗೆದದ್ದು ಎಂದು ನುಡಿದಿರುತ್ತಾರೆ, ಸದರಿ ಫೋಟೋವನ್ನು ನಿ.ಪಿ. 30 ಎಂದು ಗುರುತಿಸಲಾಯಿತು . ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ-14, 1 ನೇ ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತಿದೆ.

18.ನಂತರ ಪೊಲೀಸರು 1 ನೇ ಆರೋಪಿಯನ್ನು ಕುರಿತು ಮೃತ ಪ್ರಕಾಶನ ಆಟೋವನ್ನು ಏನು ಮಾಡಿದಿರಿ ಎಂದು ಕೇಳಿದರು. ಆಗ ಆತ ಸದರಿ ಆಟೋವನ್ನು ಚಿಕ್ಕಮಗಳೂರಿನಲ್ಲಿ ನಿಲ್ಲಿಸಿರುವುದಾಗಿ ಹೇಳಿ, ನಮ್ಮನ್ನು ಮತು ಪೊಲೀಸರನ್ನು ಅಲ್ಲಿಂದ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಕರೆದುಕೊಂಡು ಅಂಚೆ ಸೋಮನಹಳ್ಳಿ-ಸಖರಾಯಪಟ್ಟಣ ಮಾರ್ಗವಾಗಿ ಚಿಕ್ಕಮಗಳೂರಿಗೆ ಕರೆದುಕೊಂಡು ಬಂದು ಟೆಂಡರ್ ಚಿಕನ್ ಹಿಂಭಾಗದಲ್ಲಿ ಲಾರಿಗಳನ್ನು ನಿಲ್ಲಿಸುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಲಾರಿಗಳ ಹಿಂಭಾಗದಲ್ಲಿ ನಿಲ್ಲಿಸಿದ್ದ ಆಟೋವನ್ನು ತೋರಿಸಿ ಅದು ಮೃತ ಪ್ರಕಾಶನ ಆಟೋ ಎಂದು 1 ನೇ ಆರೋಪಿ ತಿಳಿಸಿದನು. ಪ್ರಕಾಶನನ್ನು ಕೊಲೆ ಮಾಡಿ ಆತನ ಆಟೋವನ್ನು ಮಾರಾಟ ಮಾಡುವ ಉದ್ದೇಶದಿಂದ ಅದನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದಾಗಿ ಆರೋಪಿತರು ತಿಳಿಸಿದರು.

19.ಸದರಿ ಆಟೋದ ಹಿಂಭಾಗದಲ್ಲಿ "ಶ್ರೀ ಜೇನುಕಲ್ " ಎಂದು ಬರೆದಿತ್ತು. ಸದರಿ ಆಟೋದ ನೊಂದಣಿ ಸಂ. ಕೆಎ-66/586 ಆಗಿರುತ್ತದೆ. ಸದರಿ ಆಟೋ ಪ್ರಕಾಶನಿಗೆ ಸೇರಿದ್ದಾಗಿರುತ್ತದೆ. ಸದರಿ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 2.30 ಗಂಟೆಯಿಂದ 3.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು, ಅದಕ್ಕೆ

ನಾನು ಮತ್ತು ಚಾಸಾ-14-ಹನುಮಂತಪ್ಪರವರು ಸಹಿ ಮಾಡಿದ್ದೇವೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿ.ಪಿ.31 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 31(ಎ) ಎಂದು ಗುರುತಿಸಲಾಯಿತು .

20.ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿ, ಸದರಿ ನಕ್ಷೆಯನ್ನು ಪೊಲೀಸರು ಮೇಲೆ ಹೇಳಿದಂತೆ ಆರೋಪಿತರು ಮೃತನ ಆಟೋವನ್ನು ತೋರಿಸಿದ ಸ್ಥಳದಲ್ಲಿಯೇ ತಯಾರಿಸಿದ್ದಾಗಿ ನುಡಿದಿರುತ್ತಾರೆ. ಸದರಿ ನಕ್ಷೆಯನ್ನು ನಿ.ಪಿ.32 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.32(ಎ) ಎಂದು ಗುರುತಿಸಲಾಯಿತು .

21.ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿ, ಸದರಿ ಫೋಟೋವನ್ನು ಮೇಲೆ ಹೇಳಿದಂತೆ ಆರೋಪಿತರು ಪ್ರಕಾಶನ ಆಟೋವನ್ನು ತೋರಿಸಿದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸುವಾಗ ತೆಗೆದದ್ದು ಎಂದು ನುಡಿದಿರುತ್ತಾರೆ, ಸದರಿ ಫೋಟೋವನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ-14, 1 ನೇ ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತಿದೆ.

22.ನಂತರ ಪೊಲೀಸರು 1 ನೇ ಆರೋಪಿಯನ್ನು ಕುರಿತು ಆಟೋಗೆ ಎಲ್ಲಿ ಡೀಜೆಲನ್ನು ಹಾಕಿಸಿಕೊಂಡಿರಿ ಎಂದು ಕೇಳಿದರು. ಆಗ 1 ನೇ ಆರೋಪಿ ತಾವು ಆಟೋಗೆ ಡೀಜೆಲನ್ನು ಹಾಕಿಸಿಕೊಂಡ ಪೆಟ್ರೋಲ್ ಬಂಕನ್ನು ತೋರಿಸುವುದಾಗಿ ಹೇಳಿ, ಅಲ್ಲಿಂದ ಮಧ್ಯಾಹ್ನ 3.00 ಗಂಟೆಗೆ ನಮ್ಮನ್ನು ಕರೆದುಕೊಂಡು ಕಡೂರಿಗೆ ಹೋಗಿ, ಕಡೂರು-ಬೆಂಗಳೂರು ಹೆದ್ದಾರಿಯಲ್ಲಿರುವ ಹಳೇ ಅಗ್ನಿಶಾಮಕ ಠಾಣೆಯ ಪಕ್ಕದಲ್ಲಿ ಇದ್ದ ಎಂ.ಎಸ್. ಪೆಟ್ರೋಲ್ ಬಂಕ್ ಗೆ ಕರೆದುಕೊಂಡು ಹೋಗಿ, ಅಲ್ಲಿಗೆ ದಿನಾಂಕಃ 14-07-2021 ರಂದು ರಾತ್ರಿ 9.00 ಗಂಟೆಗೆ ಪ್ರಕಾಶನ ಆಟೋದಲ್ಲಿ ಪ್ರಕಾಶ, ತಾನು, ಮತ್ತು 2 ನೇ ಆರೋಪಿ ಹೋಗಿ ಡೀಜೆಲ್ ಹಾಕಿಸಿಕೊಂಡಿದ್ದಾಗಿ ತಿಳಿಸಿ, ಸ್ಥಳವನ್ನು ತೋರಿಸಿರುತ್ತಾನೆ. ಪೊಲೀಸರು ಸದರಿ ಸ್ಥಳವನ್ನು ಪರಿಶೀಲಿಸಿದಾಗ, ಪೆಟ್ರೋಲ್ ಬಂಕ್‌ನ 4 ಕಡೆಗಳಲ್ಲಿ ಸಿಸಿಕ್ಯಾಮರಾವನ್ನು ಅಳವಡಿಸಿರುವುದು ಕಂಡು ಬಂದಿತು.

23.ನಂತರ ಪೊಲೀಸರು, ನಾವು, ಮತ್ತು ಆರೋಪಿತರು ಸದರಿ ಪೆಟ್ರೋಲ್ ಬಂಕಿನ ಕಛೇರಿಗೆ ಹೋದೆವು, ಅಲ್ಲಿ ಸದರಿ ಬಂಕಿನ ಮಾಲೀಕರಾದ ಶಿವಕುಮಾರ್ ರವರು ಇದ್ದರು. ಪೊಲೀಸರು ಸದರಿ ಶಿವಕುಮಾರ್ ರವರನ್ನು ಕುರಿತು ತಮ್ಮ ಪೆಟ್ರೋಲ್ ಬಂಕಿನ ದಿನಾಂಕಃ 14-07-2021 ರ ರಾತ್ರಿ 9.00 ಗಂಟೆಯ ನಂತರದ ಸಿಸಿ ಕ್ಯಾಮಾರಾ ಫೂಟೇಜನ್ನು ನೀಡುವಂತೆ ಕೇಳಿದರು. ಆಗ ಶಿವಕುಮಾರ್ ರವರು ದಿನಾಂಕಃ 14-07-2021 ರ ಸಿಸಿ ಕ್ಯಾಮರಾ ಫೂಟೇಜನ್ನು ನನ್ನ , ಚಾಸಾ-14 ಮತ್ತು ಆರೋಪಿತರ ಸಮಕ್ಷಮ

ಪೊಲೀಸರಿಗೆ ತೋರಿಸಿದರು. ಅದನ್ನು ಪೊಲೀಸರು ಚೆಕ್ ಮಾಡಿದಾಗ ರಾತ್ರಿ 9 ಗಂಟೆ 48 ನಿಮಿಷಕ್ಕೆ ಪ್ರಕಾಶನ ಆಟೋ ಸದರಿ ಪೆಟ್ರೋಲ್ ಬಂಕಿಗೆ ಬಂದಿರುವುದು, 1 ನೇ ಆರೋಪಿ ಸದರಿ ಆಟೋದ ಚಾಲಕನ ಹಿಂಭಾಗದ ಸೀಟಿನಿಂದ ಕೆಳಗೆ ಇಳಿದು ಬಂದಿರುವುದು, ಸದರಿ ಆಟೋದ ಚಾಲಕನ ಸೀಟಿನಲ್ಲಿ ಪ್ರಕಾಶ್ ಕುಳಿತಿರುವುದು ಮತ್ತು 2 ನೇ ಆರೋಪಿ ಆಟೋದ ಚಾಲಕನ ಹಿಂಭಾಗದ ಸೀಟಿನಲ್ಲಿ ಕುಳಿತಿರುವುದು ಕಂಡು ಬಂದಿತು.

24.ನಂತರ ಆಟೋಗೆ ಡೀಜೆಲ್ ಹಾಕಿಸಿಕೊಂಡ ಬಳಿಕ 1 ನೇ ಆರೋಪಿ ಪೆಟ್ರೋಲ್ ಬಂಕಿನವರಿಗೆ ದುಡ್ಡನ್ನು ಕೊಡುತ್ತಿರುವುದು ಮತ್ತು ರಾತ್ರಿ 9.53 ಗಂಟೆಗೆ ಅವರು ಆಟೋದಲ್ಲಿ ಕುಳಿತು ವಾಪಾಸು ಹೋಗುತ್ತಿರುವುದು ಕಂಡು ಬಂದಿತು. ಸದರಿ ಸಿಸಿ ಕ್ಯಾಮರಾ ಫೂಟೇಜ್ ನಲ್ಲಿ ಕಂಡು ಬಂದ ವ್ಯಕ್ತಿಗಳು ಆ ದಿನ ನಮ್ಮೊಂದಿಗೆ ಮಹಜರ್ ಗೆ ಬಂದಿದ್ದ ಆರೋಪಿತರು ಎಂದು ನಾವು ಖಾತ್ರಿಪಡಿಸಿಕೊಂಡಿರುತ್ತೇವೆ.

25.ನಂತರ ಶಿವಕುಮಾರ್ ರವರು ಒಂದು ಖಾಲಿ ಡಿವಿಡಿಯನ್ನು ತೆಗೆದು ತಮ್ಮ ಡಿವಿ ಆರ್ ಬಾಕ್ಸಿನಲ್ಲಿದ್ದ ಸಿಸಿ ಕ್ಯಾಮರಾ ಫೂಟೇಜನ್ನು ಸದರಿ ಡಿವಿಡಿಗೆ ವರ್ಗಾಯಿಸಿ ಅದನ್ನು ಪೊಲೀಸರಿಗೆ ಕೊಟ್ಟರು. ಆ ಬಗ್ಗೆ ಪೊಲೀಸರು ಸಂಜೆ 4.00 ರಿಂದ 5.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು, ಅದಕ್ಕೆ ನಾನು, ಮತ್ತು ಚಾಸಾ-14-ಹನುಮಂತಪ್ಪರವರು ಸಹಿ ಮಾಡಿದ್ದೇವೆ. ಸದರಿ ಪಂಚನಾಮೆಯನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿ.ಪಿ.33 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 33(ಎ) ಎಂದು ಗುರುತಿಸಲಾಯಿತು .

26.ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿ, ಸದರಿ ಫೋಟೋವನ್ನು ಮೇಲೆ ಹೇಳಿದಂತೆ 1 ನೇ ಆರೋಪಿ ತೋರಿಸಿದ ಪೆಟ್ರೋಲ್ ಬಂಕಿನಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿ ಸಿಸಿಕ್ಯಾಮಾರಾ ಫೂಟೇಜನ್ನು ತೆಗೆದುಕೊಳ್ಳುವ ಸಮಯದಲ್ಲಿ ತೆಗೆದದ್ದು ಎಂದು ನುಡಿದಿರುತ್ತಾರೆ, ಸದರಿ ಫೋಟೋವನ್ನು ಸದರಿ ಫೋಟೋವನ್ನು ನಿ.ಪಿ.34 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ-14, ಮತ್ತು ಪೆಟ್ರೋಲ್ ಬಂಕ್ ಮಾಲೀಕರಾದ ಶಿವಕುಮಾರ್ ರವರ ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತಿದೆ.

27.ಆ ದಿನ ಪೊಲೀಸರು ವಶಪಡಿಸಿಕೊಂಡ ಸಿಸಿ ಕ್ಯಾಮರಾ ಫೂಟೇಜನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ನ್ಯಾಯಾಂಗ ಬಂಧನದಲ್ಲಿರುವ 2 ನೇ ಆರೋಪಿಯು ಪ್ರಸ್ತುತ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದು, ಆತನ ಸಮಕ್ಷಮದಲ್ಲಿಯೇ ಸಿಸಿ ಕ್ಯಾಮರಾ ಫೂಟೇಜನ್ನು ಸಾಕ್ಷಿಯ ಮೂಲಕ ಗುರುತಿಸಬೇಕು ಎಂದು ಕೋರಿದ್ದರಿಂದ ಸಾಕ್ಷಿಯ

ಮುಂದಿನ ಮುಖ್ಯ ವಿಚಾರಣೆಯನ್ನು ಮೂಂದೂಡಲಾಯಿತು).

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ